



ಪ್ರವೇಶದೊಂದಿಗೆ ಬಹುದೊಡ್ಡ ಜನಾಂದೋಲನವಾಗಿ ರೂಪುಗೊಂಡಿತು. ಕನ್ನಡಿಗರ ಕಣ್ಮಣಿಯಾದ ವರನಟ ರಾಜ್‌ಕುಮಾರ್ ಅವರು ನಾಡುನುಡಿಗಾಗಿ ಸಾಂಸ್ಕೃತಿಕ ವಲಯವೂ ಬದ್ಧವೆಂಬುದನ್ನು ಸಾರುವಂತೆ ಗೋಕಾಕ್ ಚಳವಳಿಗೆ ಇಳಿದದ್ದರಿಂದಾಗಿ ಚಳವಳಿಯು ಕಾವು ಪಡೆದುಕೊಂಡಿತು. ಇಡೀ ನಾಡು ಹಿಂದೆಂದೂ ಕಂಡಿರದ ಒಗ್ಗಟ್ಟಿನ ಹೋರಾಟವನ್ನು ನಡೆಸಿತು. ಆಳುವ ಸರ್ಕಾರದ ವಿರುದ್ಧ ನಾನಾ ಕಾರಣಗಳಿಂದಾಗಿ ಜನಮಾನಸದಲ್ಲಿ ಅಸಮಾಧಾನ ಭುಗಿಲೆದ್ದಿದ್ದ ಆ ಸಮಯದಲ್ಲಿ ಕನ್ನಡದ ರಾಜಕೀಯ ಶಕ್ತಿಯೊಂದು ಬೃಹತ್ತಾಗಿ ಬೆಳೆಯುವ ಸದವಕಾಶದ ಸಂದರ್ಭವೊಂದು ಒದಗಿಬಂದಿತ್ತು. ದುರದೃಷ್ಟವಶಾತ್ ಅದು ರಾಜ್‌ಕುಮಾರ್ ಅವರ ರಾಜಕೀಯ ನಿರಾಸಕ್ತಿಯ ಕಾರಣದಿಂದಾಗಿ ಅಲ್ಲೇ ಮುರುಟಿಹೋಯಿತು.

ಕನ್ನಡ ಚಳವಳಿಗೆ ಬೌದ್ಧಿಕ ಶಕ್ತಿಯನ್ನು ಒದಗಿಸಿಕೊಟ್ಟವರಲ್ಲಿ ಅನಕೃ, ಕುವೆಂಪು ಅವರಂತೆಯೇ ಎಂ. ಚಿದಾನಂದಮೂರ್ತಿಗಳು ಕೂಡ ಪ್ರಮುಖರು. ಸ್ವತಃ ವಿದ್ವಾಂಸರೂ, ಸಂಶೋಧಕರೂ ಆಗಿದ್ದ ಇವರ 'ಬೃಹತ್ ಕರ್ನಾಟಕ: ಭಾಷಿಕ, ಸಾಂಸ್ಕೃತಿಕ'ದಂತಹ ಪುಸ್ತಕಗಳು ಕನ್ನಡಿಗರಲ್ಲಿ ಹೊಸದಾದ ಅರಿವನ್ನು ತುಂಬಲು ಕಾರಣವಾಯಿತು. ಬರಿಯ ಸಾಹಿತಿಯಾಗಷ್ಟೇ ಅಲ್ಲದೆ ಸ್ವತಃ ಬೀದಿಗಿಳಿದು ಹೋರಾಟ ಮಾಡುತ್ತಿದ್ದ ಚಿದಾನಂದಮೂರ್ತಿಯವರು ಒಮ್ಮೆ ಚಳವಳಿಯ ಅಂಗವಾಗಿ ಹಂಪಿಯಲ್ಲಿ ತುಂಗಭದ್ರಾ ನದಿಗೆ ಧುಮುಕಿ ಪ್ರಾಣಾರ್ಪಣೆಗೂ ಮುಂದಾಗಿದ್ದರು.

## ಕಾವೇರಿ ನದಿ ನೀರು ಹಂಚಿಕೆ

ಕನ್ನಡ ಚಳವಳಿಯ ಮತ್ತೊಂದು ಮಹತ್ವದ ಘಟ್ಟ ಕಾವೇರಿ ನದಿ ನೀರು ಹಂಚಿಕೆಯ ಸಲುವಾಗಿ ನಡೆದ ಚಳವಳಿ. ತಮಿಳುನಾಡು ಹಾಗೂ ಕರ್ನಾಟಕಗಳ ನಡುವಿನ ಕಾವೇರಿ ನದಿನೀರು ಹಂಚಿಕೆಯ ಬಿಕ್ಕಟ್ಟು ಆಗಿಂದಾಗ್ಗೆ ತಲೆ ಎತ್ತುತ್ತಲೇ ಇತ್ತು. 1991ರಲ್ಲಿ ಕಾವೇರಿ ನ್ಯಾಯಮಂಡಳಿಯು ತಮಿಳುನಾಡಿಗೆ 205 ಟಿಎಂಸಿ ನೀರು ಹರಿಸಬೇಕೆಂದು ಮಧ್ಯಂತರ ತೀರ್ಪು ಪ್ರಕಟವಾದಾಗ ದೊಡ್ಡಮಟ್ಟದ ಪ್ರತಿಭಟನೆಗಳು ಭುಗಿಲೆದ್ದವು. ಅಂದಿನಿಂದ ಕಾವೇರಿ ನ್ಯಾಯಮಂಡಳಿಯ 2007ರ ಐತೀರ್ಪು, 2018ರ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಪ್ರಕಟವಾಗುವವರೆಗೂ ಕನ್ನಡ ಚಳವಳಿಯಲ್ಲಿ ಕಾವೇರಿ ಕದನ ಮುಖ್ಯಭೂಮಿಕೆಯಲ್ಲಿತ್ತು.

## ಚಳವಳಿಗೆ 'ಕರವೇ' ಹೊಸ ಶಕ್ತಿ

ಕನ್ನಡ ಚಳವಳಿಯು 1990ರ ದಶಕದ ಹೊತ್ತಿಗಾಗಲೇ ಬೆಂಗಳೂರು ಕೇಂದ್ರಿತ ಮತ್ತು ಕೆಲವು ಗಡಿಭಾಗಗಳಿಗೆ ಸೀಮಿತವಾಗಿ ಹೆಚ್ಚುಕಡಿಮೆ ಬಿಡಿಬಿಡಿಯಾಗಿ ನಡೆಯುತ್ತಿರುವಂತೆ ಭಾಸವಾಗುತ್ತಿತ್ತು. 2000ದ ಇಸವಿಯ ನಂತರ ಕನ್ನಡ ಚಳವಳಿಯಲ್ಲಿ ಆದ ಮಹತ್ವದ ಬದಲಾವಣೆ ಎಂದರೆ 'ಕರ್ನಾಟಕ ರಕ್ಷಣಾ ವೇದಿಕೆ'ಯ ಹುಟ್ಟು. ರಾಜ್ಯಾದ್ಯಂತ ತನ್ನ ಶಾಖೆಗಳನ್ನು ಹೊಂದಿ, ಕನ್ನಡನಾಡಿನ ಎಲ್ಲಾ ಭಾಗದ ಸಮಸ್ಯೆಗಳಿಗೆ ಉಳಿದೆಲ್ಲಾ ಭಾಗಗಳ ಕನ್ನಡಿಗರು ಸ್ಪಂದಿಸುವಂತೆ ಸಂಘಟಿತಗೊಂಡು ಹುಟ್ಟಿಕೊಂಡದ್ದು ಕರ್ನಾಟಕ ರಕ್ಷಣಾ ವೇದಿಕೆ. ಕೃಷ್ಣಾ, ಕಾವೇರಿ, ಚಿತ್ರಾವತಿ, ಮಹದಾಯಿ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳ ನೀರಾವರಿ ಸಮಸ್ಯೆ, ನದಿನೀರು ಹಂಚಿಕೆ ಸಮಸ್ಯೆಗಳಿಗೆ ಸಾಮಾನ್ಯ ಜನರ ಸ್ಪಂದನೆಯಾಗಿ ಹೊರಹೊಮ್ಮಿತು. ರೈಲ್ವೇ ನೇಮಕಾತಿ, ಬ್ಯಾಂಕಿಂಗ್ ನೇಮಕಾತಿಯೂ ಸೇರಿದಂತೆ ಕನ್ನಡದ ಮಕ್ಕಳ ಉದ್ಯೋಗಾವಕಾಶಗಳ ಬಗ್ಗೆ ದನಿ ಎತ್ತಲಾಯಿತು. ಕಾವೇರಿ ದಕ್ಷಿಣ ಕರ್ನಾಟಕದ ಸಮಸ್ಯೆ, ಕೃಷ್ಣಾನದಿ, ಮಹದಾಯಿಗಾಗಿ ನಡೆದ ಕಳಸಾ ಭಂಡೂರಿ ಯೋಜನೆಯ ಪರವಾದ ಹೋರಾಟಗಳು ಉತ್ತರ ಕರ್ನಾಟಕದ್ದು ಎಂಬ ಭಾವನೆಯನ್ನು ತೊಡೆದುಹಾಕಲಾಯಿತು.

ಕಲ್ಯಾಣ ಕರ್ನಾಟಕದ ವಿಶೇಷ ಸ್ಥಾನಮಾನ, ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕಾಗಿ ಹೋರಾಟ, ಕೆಜಿಎಫ್, ಬಳ್ಳಾರಿ, ಕಾರವಾರ ಮೊದಲಾದ ಪ್ರದೇಶಗಳಲ್ಲಿ ಕನ್ನಡದ ಹಿತ ಕಾಪಾಡಲು ಸಾಲುಸಾಲು ಹೋರಾಟಗಳನ್ನು ನಡೆಸಲಾಯಿತು. ಬೆಳಗಾವಿ ಎಂಇಎಸ್ ಪುಂಡಾಟಿಕೆಗೆ ಕಡಿವಾಣ ಹಾಕಿ ಕನ್ನಡದ ಪಾಲಿಕೆ ಸದಸ್ಯರೊಬ್ಬರು ಮೇಯರ್ ಆಗಲು ಕಾರಣವಾದ ಹೋರಾಟ – ಹೀಗೆ ಹಲವಾರು ಯಶಸ್ವಿ ಕನ್ನಡ ಹೋರಾಟಗಳಿಗೆ ರಕ್ಷಣಾ ವೇದಿಕೆ ಕಾರಣವಾಯಿತು.